ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೮

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಬುಧವಾರ, ದಿನಾಂಕ: ೨೪ನೇ ಜುಲೈ, ೨೦೧೯

---

### ಸಮೂಹ – III

೧. ಕಂದಾಯ ಸಚಿವರು.

೨. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

೩. ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

೪. ಕಾರ್ಮಿಕ ಸಚಿವರು.

೫. ಅರಣ್ಯ ಸಚಿವರು.

೬. ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

---

### ರಾಯಚೂರು ಜಿಲ್ಲೆಯಲ್ಲಿರುವ ತಾಲ್ಲೂಕು ಕ್ರೀಡಾಂಗಣಗಳ ಬಗ್ಗೆ

**ಶ್ರೀ ಎಸ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೬ (೬೬೧) ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಜಿಲ್ಲೆಯ ಮಾನ್ವಿ, ಸಿರವಾರ ಹಾಗೂ ಲಿಂಗಸುಗೂರು ಪಟ್ಟಣದಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಕ್ರೀಡಾ ಪಟುಗಳಿಗೆ ಪ್ರೋತ್ಸಾಹಿಸಲು ಸರ್ಕಾರ ಕಲ್ಪಿಸಿರುವ ಸೌಲಭ್ಯಗಳೇನು;

(ಇ) ರಾಯಚೂರು ಜಿಲ್ಲೆಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಮಂಜೂರಾಗಿರುವ ಅನುದಾನ ಎಷ್ಟು ?

### ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕ ಫ್ಯಾಕ್ಟರಿ ಬಾಯ್ಲರ್ ಇತ್ಯಾದಿಗಳ ಬಗ್ಗೆ

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ) –**

೧೦೭ (೬೧೪) ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕ ಫ್ಯಾಕ್ಟರಿ, ಬಾಯ್ಲರ್ ಇತ್ಯಾದಿ ಎಷ್ಟು ವಿಭಾಗಗಳಿವೆ ;

(ಆ) ಪ್ರತಿಯೊಂದು ವಿಭಾಗದಲ್ಲೂ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಹುದ್ದೆಗಳು ಯಾವುವು ; (ರಾಜ್ಯಮಟ್ಟ, ಜಿಲ್ಲಾ, ತಾಲ್ಲೂಕು ಮಟ್ಟದ ವಿವರ ನೀಡುವುದು)

(ಇ) ಮೇಲ್ಕಾಣಿಸಿದ ವಿಭಾಗಗಳಲ್ಲಿ ಮಂಜೂರಾದ ಹುದ್ದೆಗಳೆಷ್ಟು ; ಖಾಲಿ ಇರುವ ಸಂಖ್ಯೆಗಳೆಷ್ಟು ; (ವಿವರವಾದ ಮಾಹಿತಿ ನೀಡುವುದು)

(ಈ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

### ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕಕ್ಕೆ ವಲಸೆ ಬರುತ್ತಿರುವ ಮಕ್ಕಳ ಸಮಸ್ಯೆಗಳ ಬಗ್ಗೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೮ (೭೭೩) ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪ್ರತಿ ವರ್ಷ ರಾಜ್ಯಕ್ಕೆ ಎಷ್ಟು ಮಕ್ಕಳು ತಮ್ಮ ಕುಟುಂಬದ ಜೊತೆ ವಲಸೆ ಬರುತ್ತಿದ್ದಾರೆ ;

(ಆ) ವಲಸೆ ಕುಟುಂಬಗಳ ಮಕ್ಕಳ ಪ್ರಾಥಮಿಕ ಪೂರ್ವ ಶಿಕ್ಷಣ, ಅಭಿವೃದ್ಧಿ, ಆರೋಗ್ಯ, ರಕ್ಷಣೆ, ಶಾಲಾ ಶಿಕ್ಷಣ ಮೊದಲಾದವುಗಳ ಕುರಿತು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಮತ್ತು ಯೋಜನೆಗಳೇನು ; (ವಿವರ ನೀಡುವುದು)

(ಇ) ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿಯೂ ವಲಸೆ ಮಕ್ಕಳ ಕುರಿತು ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

### ಚಿತ್ರದುರ್ಗದ ಆಡುಮಲ್ಲೇಶ್ವರ ಮೃಗಾಲಯದ ಬಗ್ಗೆ

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೯ (೬೦೨) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಿತ್ರದುರ್ಗ ಜೋಗಿಮಟ್ಟಿಯಲ್ಲಿರುವ ಆಡುಮಲ್ಲೇಶ್ವರ ಮೃಗಾಲಯ ಅಭಿವೃದ್ಧಿಗೆ ಅರಣ್ಯ ಇಲಾಖೆ ಕೈಗೊಂಡಿರುವ ಕ್ರಮಗಳೇನು ; (ಮಾಹಿತಿ ನೀಡುವುದು)

(ಆ) ಇಲ್ಲಿಗೆ ಆಗಮಿಸುವ ಪ್ರವಾಸಿಗರಿಗೆ ಮೂಲ ಸೌಕರ್ಯ ಇಲ್ಲದೆ ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ; ಹಾಗಿದ್ದಲ್ಲಿ ಅದನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ಒದಗಿಸುವುದು)

## ಸಾರ್ವಜನಿಕರಿಗೆ ಅವಶ್ಯವಿರುವ ಸೇವೆ ಸೌಲಭ್ಯಗಳ ಬಗ್ಗೆ

**ಶ್ರೀ ಯು.ಬಿ. ವೆಂಕಟೇಶ್** (**ನಾಮನಿರ್ದೇಶನ ಹೊಂದಿದವರು**) –

೧೧೦ (೧೦.೨) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಾರ್ವಜನಿಕರಿಗೆ ಅವಶ್ಯವಿರುವ ಸೇವೆಗಳಾದ ಭೂ ನಕ್ಷೆ ಮಂಜೂರಾತಿ ಕಟ್ಟಡ ನಿರ್ಮಾಣ ಮಂಜೂರಾತಿ ವಿದ್ಯುತ್ ಸಂಪರ್ಕ ತೆರಿಗೆ ಪಾವತಿ ಇನ್ನಿತರ ಎಲ್ಲಾ ಸೌಲಭ್ಯಗಳು ಒಂದೇ ಕಿಂಡಿಯಲ್ಲಿ ದೊರೆಯುವಂತೆ ಮಾಡಲು ಸರ್ಕಾರದ ಮುಂದಿರುವ ಯೋಜನೆಗಳಾವುವು ;

(ಆ) ಇದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸರ್ಕಾರಿ ಜಮೀನುಗಳಲ್ಲಿ ಬಂಡಿದಾರಿ & ಕಾಲುದಾರಿ ಮಂಜೂರಾದ ಬಗ್ಗೆ

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** –

೧೧೧ (೬೧೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಾರ್ವಜನಿಕರಿಗೆ ರೈತ ಬಂಧುಗಳಿಗೆ ಸರ್ಕಾರದಿಂದ ವಿವಿಧ ಯೋಜನೆಯಡಿ ಮಂಜೂರಾತಿ ಮಾಡುವ ಜಮೀನುಗಳಲ್ಲಿ ಇತರೆ ಸಾರ್ವಜನಿಕ ರೈತ ಬಂಧುಗಳು ತಿರುಗಾಡಲು ಕರ್ನಾಟಕ ಭೂ ಕಂದಾಯ ಕಾಯ್ದೆ ಅನುಸಾರ " ಕಾಲುದಾರಿ & ಬಂಡಿದಾರಿ" ಗುರುತಿಸಿ ಮಂಜೂರಾತಿ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ;

(ಆ) ಕರ್ನಾಟಕ ಭೂ ಕಂದಾಯ ಕಾಯ್ದೆ ಅನುಸಾರ ರಾಜ್ಯದಲ್ಲಿ "ಕಾಲುದಾರಿ ಅಥವಾ ಬಂಡಿದಾರಿ" ಕಾನೂನು ಜಾರಿಯಲ್ಲಿದ್ದರೆ ಇದರ ಸಂಪೂರ್ಣ ವಿವರಗಳ ಮಾಹಿತಿ ನೀಡುವುದು ?

## ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೧೧೨ (೭೬೯) ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ ಅಡಿ ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು ; ಅದೇ ರೀತಿ ಕೇಂದ್ರ ಸರ್ಕಾರ ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ ಅಡಿ ಪ್ರತಿ ಜಿಲ್ಲೆಗೆ ಬಿಡುಗಡೆಯಾದ ಅನುದಾನ ಎಷ್ಟು ; (ಮಾಹಿತಿ ನೀಡುವುದು)

(ಆ) ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ ಅಡಿ ತರಬೇತಿ ನೀಡಲು ಪ್ರತಿ ಜಿಲ್ಲೆಯಲ್ಲಿ ಎಷ್ಟು ಖಾಸಗಿ ತರಬೇತಿ ಕೇಂದ್ರಗಳನ್ನು ಗುರುತಿಸಲಾಗಿದೆ ; ಮತ್ತು ಅವುಗಳಿಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು ; (ವಿವರವಾದ ಮಾಹಿತಿ ನೀಡುವುದು)

(ಇ) ೨೦೧೮ ಮತ್ತು ೨೦೧೯ನೇ ಸಾಲಿನಲ್ಲಿ ಕೌಶಲ್ಯ ತರಬೇತಿ ನೀಡುವ ಅನುಮತಿ ನೀಡಿದ ಖಾಸಗಿ ತರಬೇತಿ ಕೇಂದ್ರಗಳಿಗೆ ಅನುದಾನ ಬಿಡುಗಡೆಯಾಗಿಲ್ಲ ಎಂಬ ಆಪಾದನೆ ಇರುವುದು ನಿಜವೇ ; ಹಾಗಿದ್ದಲ್ಲಿ, ಎಷ್ಟು ಖಾಸಗಿ ತರಬೇತಿ ಕೇಂದ್ರಗಳಿಗೆ ಬಿಡುಗಡೆ ಆಗಿಲ್ಲ, ಆಗಬೇಕಾದ ಬಾಕಿ ಮೊತ್ತ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಪಿಟಿಸಿಎಲ್ ಕಾಯ್ದೆಯಡಿ ಅನುಮತಿಗೆ ವಿಳಂಬ ಅವ್ಯವಹಾರ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೩ (೬೧೯) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಪಿಟಿಸಿಎಲ್ ಕಾಯ್ದೆ ಅಡಿ ಜಮೀನು ಮಾರಾಟ ಮಾಡಲು ಅನುಮತಿ ನೀಡಿರುವ ಪ್ರಕರಣಗಳೆಷ್ಟು ; ತಿರಸ್ಕರಿಸಿರುವ / ತಿರಸ್ಕರಿಸದೆ ವಿಳಂಬ ನೀತಿ ಅನುಸರಿಸುತ್ತಿರುವ ಪ್ರಕರಣಗಳೆಷ್ಟು ; ತಿರಸ್ಕರಿಸಿರುವುದಕ್ಕೆ ಕಾರಣಗಳೇನು ; (ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಅನುಮತಿ ನೀಡಲು ಕಾಲಮಿತಿ ನಿಗದಿಪಡಿಸಲಾಗಿದೆಯೇ ; ಅನುಮತಿ ನೀಡುವಲ್ಲಿ ಇಲಾಖೆಯಲ್ಲಿ ನಿರಂತರವಾಗಿ ಭಾರಿ ಅವ್ಯವಹಾರ, ಭ್ರಷ್ಟಾಚಾರ,

ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇಲಾಖೆಯಲ್ಲಿ ಯಾವುದೇ ಹಂತದಲ್ಲಿ ನಡೆಯುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ? (ಹೆಸರು ಸಮೇತ ವಿವರ ಒದಗಿಸುವುದು)

**ಕೊಡಗು ಜಿಲ್ಲೆಯಲ್ಲಿ ಕಳೆದ ವರ್ಷ ಸಂಭವಿಸಿದ ಪ್ರಕೃತಿ ವಿಕೋಪದಲ್ಲಿ ಸಂಭವಿಸಿರುವ ಕಾಫಿ ಬೆಳೆ ನಷ್ಟಕ್ಕೆ ಪರಿಹಾರ ನೀಡುವ ಕುರಿತು**

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ** (ವಿಧಾನಸಭೆಯಿಂದ ಚುನಾಯಿತರಾದವರು) –

೧೧೪ (೭೭೪) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೊಡಗು ಜಿಲ್ಲೆಯಲ್ಲಿ ಕಳೆದ ವರ್ಷ ಸಂಭವಿಸಿದ ಪ್ರಕೃತಿ ವಿಕೋಪದಲ್ಲಿ ಆಗಿರುವ ಕಾಫಿ ತೋಟದ ನಷ್ಟದ ಪರಿಮಾಣ ಎಷ್ಟು ;

(ಆ) ಕಾಫಿ ತೋಟಗಳ ನಷ್ಟಕ್ಕೆ ಅಂದಾಜಿಸಿರುವ ಪರಿಹಾರದ ಮೊತ್ತವೇನು ಹಾಗೂ ಈ ನಷ್ಟ ಪರಿಹಾರದ ಅಂದಾಜನ್ನು ಯಾವ ಮಾನದಂಡಗಳ ಪ್ರಕಾರ ಮಾಡಲಾಗಿದೆ ;

(ಇ) ಅಂದಾಜಿಸಿರುವ ಪ್ರಕಾರ ಸಂಪೂರ್ಣ ಪರಿಹಾರದ ಮೊತ್ತವನ್ನು ಭರಿಸಲಾಗಿದೆಯೇ ;

(ಈ) ಭರಿಸದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಈ ಪರಿಹಾರದ ಮೊತ್ತವನ್ನು ಭರಿಸಲಾಗುವುದು ?

**ಸ್ಮಶಾನ ಮಂಜೂರಾತಿ ಕುರಿತು**

**ಶ್ರೀ ಆರ್. ಪ್ರಸನ್ನ ಕುಮಾರ್** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೧೧೫ (೬೦೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಯ ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳ ಎಲ್ಲಾ ಗ್ರಾಮಗಳಲ್ಲಿ ಸಾರ್ವಜನಿಕ ಸ್ಮಶಾನ ಮಂಜೂರು ಮಾಡಲಾಗಿದೆಯೇ ; ಇಲ್ಲದಿದ್ದಲ್ಲಿ, ಸ್ಮಶಾನಕ್ಕೆ ಜಾಗವನ್ನು ಕಾಯ್ದಿರಿಸಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಕೆಲವು ಗ್ರಾಮಪಂಚಾಯಿತಿಗಳಲ್ಲಿ ಸಾರ್ವಜನಿಕ ಸ್ಮಶಾನ ಮಂಜೂರಾಗಿದ್ದು, ಸದರಿ ಸ್ಮಶಾನ ಜಾಗ ಗುರುತಿಸಲು ಸರ್ಕಾರಕ್ಕಿರುವ ಅಡೆತಡೆಗಳೇನು ;

(ಇ) ಸ್ಮಶಾನಗಳ ಅಭಿವೃದ್ಧಿಗೆ ರಸ್ತೆ, ನೀರು, ದೀಪದ ವ್ಯವಸ್ಥೆ ಮತ್ತು ಕಾಂಪೌಂಡ್ ವ್ಯವಸ್ಥೆಗಳನ್ನು ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಐ.ಟಿ.ಐ. ಕಾಲೇಜುಗಳಲ್ಲಿನ ಖಾಲಿಯಿರುವ ಹುದ್ದೆಗಳ ಭರ್ತಿ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೬ (೭೦೨) ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆ (ಐ.ಟಿ.ಐ.) ಕಾಲೇಜುಗಳ ಸಂಖ್ಯೆ ಎಷ್ಟು ; ಈ ಕಾಲೇಜುಗಳಲ್ಲಿ ದಾಖಲಾತಿ ಮತ್ತು ಹಾಜರಾತಿ (ವಿಭಾಗವಾರು) ಹಾಗೂ ಮಂಜೂರಾಗಿರುವ ಹುದ್ದೆ ಖಾಲಿ ಹುದ್ದೆಗಳ ಮಾಹಿತಿಯನ್ನು ತಾಲ್ಲೂಕುವಾರು ನೀಡುವುದು : (ಬೋಧಕ ಮತ್ತು ಬೋಧಕೇತರ)

(ಆ) ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ಪ್ರಸ್ತುತ ಖಾಲಿ ಹುದ್ದೆಗಳ ನಿರ್ವಹಣೆಗೆ ಯಾವ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ ;

(ಇ) ಮಂಡ್ಯ ಜಿಲ್ಲಾ ವ್ಯಾಪ್ತಿಯ ಹೊಸ ಐ.ಟಿ.ಐ. ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯ ಪ್ರಯೋಗಾಲಯಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಪ್ರಯೋಗಾಲಯವಿಲ್ಲದ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪರ್ಯಾಯ ವ್ಯವಸ್ಥೆ ಒದಗಿಸಲಾಗಿದೆಯೇ ? (ವಿವರ ನೀಡುವುದು)

## ಕೌಶಲ್ಯಾಭಿವೃದ್ಧಿ ಇಲಾಖೆಯಡಿ ಎ.ಬಿ.ಸಿ.ಡಿ. ವರ್ಗದ ಹುದ್ದೆಗಳ ಬಗ್ಗೆ ಮಾಹಿತಿ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೧೧೭ (೭೬೬) ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೌಶಲ್ಯಾಭಿವೃದ್ಧಿ ಇಲಾಖೆಯಡಿ ಎ.ಬಿ.ಸಿ.ಡಿ. ವರ್ಗದಡಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; (ಪ್ರತ್ಯೇಕವಾಗಿ ವಿವರಗಳನ್ನು ನೀಡುವುದು)

(ಆ) ಸದರಿ ಹುದ್ದೆಗಳು ಯಾವ ಸಮಯದಿಂದ ಬಾಕಿ ಇವೆ ; (ಪ್ರತ್ಯೇಕವಾಗಿ ವಿವರಗಳನ್ನು ನೀಡುವುದು)

(ಇ) ಬಡ್ತಿ ಹಾಗೂ ನೇರ ನೇಮಕಾತಿಯಿಂದ ತುಂಬಬೇಕಾದ ಹುದ್ದೆಗಳ ಸಂಖ್ಯೆ ಎಷ್ಟು ; (ಪ್ರತ್ಯೇಕವಾಗಿ ವಿವರಗಳನ್ನು ನೀಡುವುದು)

(ಈ) ಸದರಿ ಹುದ್ದೆಗಳನ್ನು ತುಂಬಲು ಸರ್ಕಾರ ಇದುವರೆವಿಗೂ ಕೈಗೊಂಡ ಕ್ರಮಗಳೇನು;

(ಉ) ಸದರಿ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು ?

## ಕೌಶಲ್ಯಾಭಿವೃದ್ಧಿ ಯೋಜನೆಯ ಅನುಷ್ಠಾನದ ಬಗ್ಗೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೮ (೬೯೪) ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರದ ಮಹತ್ವಾಕಾಂಕ್ಷೆ ಕೌಶಲ್ಯಾಭಿವೃದ್ಧಿ ಯೋಜನೆಯನ್ನು ಯಾವ ವರ್ಷದಿಂದ ಜಾರಿಗೆ ತರಲಾಗಿದೆ ;

(ಆ) ೨೦೧೭–೧೮, ೨೦೧೮–೧೯ ಹಾಗೂ ೨೦೧೯–೨೦ರ ಹಣಕಾಸು ವರ್ಷದಲ್ಲಿ ಕೌಶಲ್ಯಾಭಿವೃದ್ಧಿ ಯೋಜನೆಗೆ ಒದಗಿಸಿರುವ ಅನುದಾನವೆಷ್ಟು ;

(ಇ) ಈ ಒಟ್ಟು ಅನುದಾನದಲ್ಲಿ ಈವರೆಗೆ ವ್ಯಯ ಮಾಡಲಾದ ಮೊತ್ತವೆಷ್ಟು ;

(ಈ) ಈ ಯೋಜನೆಯಲ್ಲಿ ಈವರೆಗೆ ರಾಜ್ಯದಲ್ಲಿ ಎಷ್ಟು ಲಕ್ಷ ಯುವ ಜನತೆಗೆ ತರಬೇತಿ ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಉ) ಈ ರೀತಿ ತರಬೇತಿ ಪಡೆದ ಯುವ ಜನತೆಯಲ್ಲಿ ಎಷ್ಟು ಜನರಿಗೆ ಉದ್ಯೋಗಾವಕಾಶ ಒದಗಿಸಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

## ಶಿವಮೊಗ್ಗ ಜಿಲ್ಲೆಯಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಅನುದಾನ ಬಿಡುಗಡೆ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೯ (೬೦೮) ಮುಜರಾಯಿ ಹಾಗೂ ಕೌಲಶ್ಯ ಅಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲಾಗಿದೆ ; (ಕಳೆದ ಎರಡು ವರ್ಷಗಳ ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಅನುದಾನಕ್ಕಾಗಿ ಬೇಡಿಕೆಯನ್ನು ಸಲ್ಲಿಸುತ್ತಿದ್ದು ಅನುದಾನದ ಕೊರತೆ ಉಂಟಾಗಿರುವುದರಿಂದ ಹೆಚ್ಚು ಹಣವನ್ನು ಆಯವ್ಯಯದಲ್ಲಿ ಮೀಸಲಿಡಲು ಅಗತ್ಯ ಕ್ರಮಕೈಗೊಳ್ಳಲಾಗುವುದೇ ;

(ಇ) ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

## ಪೋಡಿ ಅರ್ಜಿಗಳ ವಿಲೇವಾರಿ ಬಗ್ಗೆ

**ಶ್ರೀ ಎನ್. ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೦ (೬೯೮) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಪೋಡಿಗಾಗಿ ಬಾಕಿ ಇರುವ ಅರ್ಜಿಗಳೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಿಂದ ರಾಜ್ಯಾದ್ಯಂತ ಪೋಡಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳೆಷ್ಟು ; ಆ ಪೈಕಿ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಇ) ಪೋಡಿಗಾಗಿ ಸಲ್ಲಿಕೆಯಾದ ಅರ್ಜಿಗಳನ್ನು ಇತ್ಯರ್ಥಪಡಿಸಲು ಕಾಲಮಿತಿ ಇದೆಯೇ ; ಕಾಲಮಿತಿಯೊಳಗೆ ಅರ್ಜಿಗಳನ್ನು ವಿಲೇವಾರಿ ಮಾಡದ ಎಷ್ಟು ಜನ ಅಧಿಕಾರಿಗಳ ವಿರುದ್ಧ ಸಿ.ಸಿ.ಎ. ನಿಯಮಾವಳಿ ಅನ್ವಯ ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಈ) ಪೋಡಿಗಾಗಿ ಬಾಕಿ ಇರುವ ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಉ) ಈ ವರೆವಿಗೂ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಪೋಡಿಗಾಗಿ ದಾಖಲಾದ ಪ್ರಕರಣಗಳೆಷ್ಟು ; ಮಾನ್ಯ ಉಚ್ಚನ್ಯಾಯಾಲಯದಲ್ಲಿ ತೀರ್ಮಾನಗೊಂಡು ಪೋಡಿಮಾಡಲು ಆದೇಶವಾಗಿರುವ ಪ್ರಕರಣಗಳು ಎಷ್ಟು ; ಮಾನ್ಯ ಉಚ್ಚನ್ಯಾಯಾಲಯದ ಆದೇಶದ ನಂತರವೂ ಪೋಡಿ ಕಾರ್ಯಗಳು ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಪಿ7, ಕಾಸೂ. 298, ಪ್ರತಿಗಳು 400

**List of Questions for Oral Answers**

**Total No. of Questions - 15**

**LIST - 08**

# KARNATAKA LEGISLATIVE COUNCIL

## ONE HUNDRED AND THIRTY EIGHTH SESSION

## Wednesday, the 24th July, 2019

---

**GROUP - III**

1. Minister for Revenue
2. Minister for Women and Child Development, Empowerment of Differently Abled and Senior Citizens
3. Minister for Muzrai and Skill Development, Entrepreneurship and Livelihood
4. Minister for Labour
5. Minister for Forest
6. Minister for Youth Empowerment and Sports

---

***TALUK STADIUMS IN RAICHUR DISTRICT***

***Sri N.S. Bose Raju (Elected by Legislative Assembly)*** -

106 (771) Will the Minister for Youth Empowerment and Sports be pleased to state:-

a) the steps taken by the Government to construct the taluk stadium in Manvi, Siruvara and Lingasugur town of Raichur district;

b) the facilities provided by the Government to encourage sports persons;

c) the grant that has been released by the Youth Empowerment and Sports department to Raichur district?

### FACTORIES IN LABOUR DEPARTMENT

**Sri Ayanur Manjunath (Graduates' Constituency) -**

107 (614) Will the Minister for Labour be pleased to state:-

a) the number of divisions like labour, factory, boiler existed in the Labour department;

b) the particulars of posts of officers who are working in each division; (State level, district level, taluk level details be furnished)

c) the number of posts sanctioned in the above said divisions; the number of posts lying vacant; (detailed information be furnished)

d) the steps taken by the Government to fill up the vacant posts?

### PROBLEMS OF MIGRANT CHILDREN

**Sri Kavatagimath Mahantesh Mallikarjun (Local Authorities Constituency) -**

108 (773) Will the Minister for Women and Child Development, Empowerment of Differently Abled and Senior Citizens be pleased to state:-

a) the number of children are migrating to the State every year along with their parents;

b) the measures and schemes taken by the State Government on the pre-primary education, development, health, protection, school education etc of children of migrant families; (details be furnished)

c) the steps taken for migrant children in every district of the State? (details be furnished)

### ADUMALLESHWARA ZOO IN CHITRADURGA

**Sri G. Raghu Achar (Local Authorities Constituency) -**

109 (612) Will the Minister for Forest be pleased to state:-

a) the steps taken by the Forest department for the development of Adumalleshwara Zoo in Jogimatti of Chitradurga; (information be furnished)

b) whether the Government is aware of the fact that the tourists who visit the zoo are facing hardship due to lack of basic facilities; if so, the steps taken to solve the same? (information be furnished)

### *SERVICE FACILITIES REQUIRED FOR THE PUBLIC*

***Sri U.B. Venkatesh (Nominated) -***

110 (102) Will the Minister for Revenue be pleased to state:-

a) the particulars of the schemes before the Government to provide necessary services such as approval of land plan, sanctioning for construction of building, electricity connection, payment of tax and all other facilities to the public in a single window;

b) if so, the steps taken by the Government in this regard?

### *CARTPATH AND FOOTPATH IN GOVERNMENT LANDS*

***Sri M.K. Pranesh (Local Authorities Constituency) -***

111 (615) Will the Minister for Revenue be pleased to state:-

a) the impediments before the Government for identifying and sanctioning the "cartpath and footpath" as per the Karnataka Land Revenue Act so as to allow the public and farmers to wander through the lands sanctioned under various schemes of the Government;

b) if the "cartpath and footpath" law is being enforced in the State as per the Karnataka Land Revenue Act, the complete detailed information of the same be furnished?

### *THE PROGRAMMES UNDER CHIEF MINISTERS' KAUSHALYA KARNATAKA YOJANE*

***Sri S.V. Sankanur (Graduates' Constituency) -***

112 (769) Will the Minister for Muzrai and Skill Development, Entrepreneurship and Livelihood be pleased to state:-

a) the grant released to each district under Chief Ministers' Kaushalya Karnataka Yojane; similarly, the grant released to each district under Pradhan Mantri Kaushalya Vikasa Yojana; (information be furnished)

b) the number of private training centres identified to impart training under Chief Ministers' Kaushalya Karnataka Yojane; the grant released for the same; (detailed information be furnished)

c) whether it is true that there is an allegation about the grant has not been released to the training centres to which permission has given to impart skill training during 2018 and 2019; if so, the number of such training centres; outstanding amount to be released? (districtwise information be furnished)

***DELAY AND IRREGULARITIES IN PTCL ACT***

***Sri N. Ravi Kumar (Elected by Legislative Assembly) -***

113 (619) Will the Minister for Revenue be pleased to state:-

a) the number of cases in which permission has been given to sell the land under PTCL Act in the State; the number of cases rejected/the delay tactic is following without rejecting; the reasons for rejection; (complete information regarding Bengaluru Urban and Bengaluru Rural district be furnished)

b) whether timelimit has been fixed for giving permission; whether it has come to the notice of the Government that large scale irregularities and corruption are taking place continously in the department for giving permission; the steps taken by the Government to prevent corruption at any stage in the department;

c) the number of pending cases? (details alongwith the names be furnished)

***COMPENSATION TO LOSS OF COFFEE CROP***

***Smt. S.Veena Achaiah (Elected by Legislative Assembly) -***

114 (774) Will the Minister for Revenue be pleased to state:-

a) the quantum of loss caused to coffee plantation due to natural calamity occurred in Kodagu district during the last year;

b) the estimated compensation amount for the loss of coffee plantation and the particulars of the measure on which basis the same has been determined;

c) whether compensation has been provided completely as per the estimation;

d) if not, the timelimit within which the said amount would be provided?

**_SANCTION OF GRAVEYARD_**

**_Sri R.Prasanna kumar (Local Authorities Constituency) -_**

115 (607) Will the Minister for Revenue be pleased to state:-

a) whether public graveyard has been sanctioned in all villages of Honnali and Channagiri taluks of Shivamogga and Davanagere districts; if not, the steps taken by the Government about reserving the land for graveyard;

b) the impediments before the Government to identify the place for said graveyard since public graveyard has been sanctioned in some Grama Panchayats;

c) the steps taken by the Government to provide road, water, street lamp facility and compound for the development of graveyards?

**_FILLING UP OF VACANT POSTS IN ITI COLLEGES_**

**_Sri N. Appajigowda (Local Authorities Constituency) -_**

116 (702) Will the Minister for Muzrai and Skill Development, Entrepreneurship and Livelihood be pleased to state:-

a) the total number of Government Industrial Training Institutes(ITI) colleges in the limits of Mandya district; talukwise information of admission, attendance (sectionwise) and posts sanctioned and posts lying vacant in these colleges be furnished; (teaching and non-teaching)

b) the steps taken by the Government to fill up the vacant posts; the particulars of alternative arrangement that has been made for the management of vacant posts at present;

c) whether it has come to the notice of the Government that there is no infrastructure and laboratory facilities in the new ITI colleges in the limits of Mandya district; if so, whether alternative arrangement has been provided to the students who are studying in such colleges? (details be furnished)

### *POSTS OF A,B,C,D CATEGORIES UNDER SKILL DEVELOPMENT DEPARTMENT*

***Sri Marithibbe Gowda (Teachers' Constituency) -***

117 (766) Will the Minister for Muzrai and Skill Development, Entrepreneurship and Livelihood be pleased to state:-

a) the number of posts sanctioned under the A,B,C,D categories under the department of Skill Development; (details be furnished separately)

b) the duration by which the said posts are vacant; (details be furnished separately)

c) the number of posts that has to be filled up by promotion and direct recruitment; (details be furnished separately)

d) the steps taken by the Government so far to fill up the said posts;

e) the timelimit within which the said posts would be filled up?

### *IMPLEMENTATION OF SKILL DEVELOPMENT SCHEME*

***Sri Kavatagimath Mahantesh Mallikarjun (Local Authorities Constituency) -***

118 (694) Will the Minister for Muzrai and Skill Development, Entrepreneurship and Livelihood be pleased to state:-

a) the year from which the Governments' most ambitious skill development scheme has been implemented;

b) the grant provided to skill development scheme for the financial years 2017-18, 2018-19 and 2019-20;

c) out of which the amount spent so far;

d) the lakhs of youth to whom training has been imparted in the State so far; (districtwise details be furnished)

e) among them, the number of persons who have got job? (districtwise details be furnished)

**_RESTORATION OF TEMPLES IN SHIVAMOGGA DISTRICT_**

**_Sri R.Prasanna kumar (Local Authorities Constituency) -_**

119 (608) Will the Minister for Muzrai and Skill Development, Entrepreneurship and Livelihood be pleased to state:-

a) the number of temples in Shivamogga district for which grant has been released by the Government for restoration; (talukwise information for the last two years be furnished)

b) whether necessary action would be taken to earmark more amount in the budget due to shortage of grant as the people representatives and public are demanding for the same;

c) the steps taken by the Government in this regard?

**_DISPOSAL OF PODI APPLICATIONS_**

**_Sri N. Appajigowda (Local Authorities Constituency) -_**

120 (698) Will the Minister for Revenue be pleased to state:-

a) the number of pending applications for podi in the state; (districtwise details be furnished)

b) the number of applications that has been submitted for podi across the State for the last 3 years; out of which, the number of applications that has been disposed; (districtwise details be furnished)

c) whether there is timelimit for settling the applications submitted for podi; the action that has been taken against the number of officers as per the CCA rules for not disposing the applications within the timelimit; (details be furnished)

d) the steps taken by the Government for speedy disposal of pending applications;

e) the number of cases filed before the Hon'ble High Court for podi so far; the number of cases that have been ordered for podi after decision taken in the Hon'ble High Court; whether it has come to the notice of the Government that podi work has not yet done eventhough there is an order of the Hon'ble High Court; if so, the action taken by the Government?

**K.R. MAHALAKSHMI**
Secretary (I/c)
Karnataka Legislative Council.

Vikasa Soudha, Bengaluru, P7, wd 298. 400 Copies